ಸಿ. ಡಬ್ಲ್ಯೂ: 01.

ದಿನಾಂಕಃ 18-12-2019 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ವಿ.ಕೆ. ವಕೀಲರಿಂದಃ</u>

ನಾನು ಹಾಜರುಪಡಿಸಿದ ನಿಪಿ-1 2017 ನೇ ಸಾಲಿನದ್ದು ಎಂದರೆ ಸರಿ. 2014 ರಲ್ಲಿ ದಾವೆಯನ್ನು ಸಲ್ಲಿಸಿದಾಗ ಮಾರುಕಟ್ಟೆ ಬೆಲೆ ಕಡಿಮೆ ಇತ್ತು ಎಂದರೆ ಸಾಕ್ಷಿಯು ರೂ. ಐದು ಲಕ್ಷಕ್ಕಿಂತ ಹೆಚ್ಚು ಇತ್ತು ಎಂದಿದ್ದಾರೆ. ದಿಃ 20-04-2017 ರಂದು ದಾವಾ ಸ್ವತ್ತಿನ ಬೆಲೆ ಚದರಕ್ಕೆ 2600/- ರೂ. ಬೆಲೆ ಇದ್ದ ಮಾರ್ಗ ಸೂಚಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅದು ಸರಿಯಾಗಿದ್ದು, ಅದು ನಿಶಾನೆಯಾಗಿರುವುದಿಲ್ಲ. ಅದೇ ರೀತಿ 2016 ನೇ ಸಾಲಿನ ಮಾರ್ಗಸೂಚಿಯನ್ನು ಹಾಜರುಪಡಿಸಿದ್ದು, ಅದೂ ಕೂಡಾ ನಿಶಾನೆಗೊಂಡಿಲ್ಲ ಮತ್ತು ಅದರಲ್ಲಿರುವ ವಿಚಾರಗಳು ಸತ್ಯವಾಗಿದೆ. 2016 ಮತ್ತು 2017 ರ ಮಾರ್ಗಸೂಚಿಯನ್ನು ಗಣನೆಗೆ ತೆಗೆದುಕೊಂಡಾಗ ಈ ದಾವೆಯು ನ್ಯಾಯಾಲಯದ ವ್ಯಾಪ್ತಿಯಾಳಗೆ ಬರುತ್ತದೆ ಎಂದರೆ ಸರಿಯಲ್ಲ. ಈ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತಿದ್ದರೂ ಬರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.
ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.